ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ-2

ಸಂಖ್ಯೆ: ಸಿ2/ಸಶಿಅ/ ಡಾ.ಸೆ.ಅ.ಸೇ/58/2011-12 ದಿನಾಂಕ: 4/10/2011

ಕೊಟೇಷನ್ ಆಹ್ವಾನ

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ-2 ರವರ ವತಿಯಿಂದ ನವಂಬರ್ 2011 ರಿಂದ ಅಕ್ಟೋಬರ್ 2012 ರ ಅಂತ್ಯದವರೆಗೆ ಡಾಟಾ ಎಂಟ್ರಿ ಆಪರೇಟರ್‌ಗಳು, ಭದ್ರತಾ ಕಾವಲುಗಾರರು ಮತ್ತು ಗ್ರೂಪ್ ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸಲು ಅರ್ಹ ಸಂಸ್ಥೆಗಳಿಂದ ಕೊಟೇಷನ್ ಆಹ್ವಾನಿಸಿದೆ. ಈ ಬಗ್ಗೆ ಹೆಚ್ಚಿನ ವಿವರವನ್ನು ಈ ಕಛೇರಿಯಿಂದ ಹಾಗೂ ವೆಬ್‌ಸೈಟ್ www.schooleducation.kar.nic.in ಮತ್ತು ssakarnataka.gov.in ಯಿಂದ ಪಡೆಯಬಹುದಾಗಿದೆ.

ಕೊಟೇಷನ್‌ಗಳನ್ನು ದಿನಾಂಕ: 21/10/2011 ರಂದು ಸಂಜೆ 5.00 ಗಂಟೆಯೊಳಗೆ ಮೊಹರಾದ ಲಕೋಟೆಯಲ್ಲಿ ಸಲ್ಲಿಸಬೇಕು. ಲಕೋಟೆಯ ಮೇಲೆ " ಮಾನವ ಸಂಪನ್ಮೂಲಗಳನ್ನು ಒದಗಿಡಲು ಲಕೋಟೆ" ಎಂದು ಬರೆದಿರಬೇಕು.

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ-2

ಸಂಖ್ಯೆ: ಸಿ2/ಸಶಿಅ/ಡಾ.ಸೆ.ಅ.ಸೇ/58/2010-11 ದಿನಾಂಕ: 4/10/2011

ಕೊಟೇಷನ್ ಆಹ್ವಾನ

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು-2 ಈ ಕಚೇರಿಯಲ್ಲಿ ಹಾಗೂ ಅಧೀನದ 5 ಕ್ಷೇತ್ರ ಸಂಪನ್ಮೂಲ ಕಚೇರಿಗಳಲ್ಲಿ ನವಂಬರ್-2011 ರಿಂದ 2012ರ ಅಕ್ಟೋಬರ್ ಅಂತ್ಯದವರೆಗೆ ಡಾಟಾ ಎಂಟ್ರಿ ಆಪರೇಟರ್‌ಗಳು, ಭದ್ರತಾ ಕಾವಲುಗಾರರು ಮತ್ತು ಗ್ರೂಪ್-ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸುವ ಬಗ್ಗೆ ಅಂಗೀಕೃತ ಸಂಸ್ಥೆಗಳಿಂದ ಕೊಟೇಷನ್ ಆಹ್ವಾನಿಸಿದೆ. ಸಂಸ್ಥೆಯವರು ಅನುಭಂದ-2ರಲ್ಲಿ ಸೂಚಿಸಿರುವಂತೆ ತಮ್ಮ ದರಪಟ್ಟಿಯನ್ನು ಸಲ್ಲಿಸಬಹುದಾಗಿರುತ್ತದೆ. ಈ ಕೆಳಕಂಡ ಮಾನವ ಸಂಪನ್ಮೂಲದ ಅಗತ್ಯವಿರುತ್ತದೆ.

| ಕ್ರ.ಸಂ | ಸಂಪನ್ಮೂಲ | ಇರಬೇಕಾದ ವಿದ್ಯಾರ್ಹತೆ | ಅನುಭವ | ಬೇಕಾಗಿರುವ ನೌಕರರ ಸಂಖ್ಯೆ |
|---|---|---|---|---|
| 1 | ಡಾಟಾ ಎಂಟ್ರಿ ಆಪರೇಟರ್ | ಪಿ.ಯು.ಸಿ ಮತ್ತು 2 ವರ್ಷದ ಕಂಪ್ಯೂಟರ್ ಸರ್ಟಿಫಿಕೇಟ್ ಕೋರ್ಸ್ | 2 ವರ್ಷಗಳು | 7 |
| 2 | ಸೆಕ್ಯೂರಿಟಿ | ಏಳನೇ ತರಗತಿ ಉತ್ತೀರ್ಣರಾಗಿದ್ದು, ದೃಢಕಾಯ ಶರೀರವನ್ನು ಹೊಂದಿರಬೇಕು | 1 ವರ್ಷ | 6 |
| 3 | ಗ್ರೂಪ್ ಡಿ | ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು | 1 ವರ್ಷ | 1 |

ಷರತ್ತುಗಳು:

1. ಸಂಸ್ಥೆಯು ಆರ್ಥಿಕವಾಗಿ ಸದೃಢವಾಗಿರತಕ್ಕದ್ದು.
2. ಸಂಸ್ಥೆಯು ಸೇವಾ ತೆರಿಗೆ ಪಾವತಿಸಲು ಪಡೆದಿರುವ ನೋಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸುವುದು.
3. ಸಂಸ್ಥೆಯ ಆಡಿಟ್‌ಗೆ ಸಂಬಂಧಿಸಿದಂತೆ ಮೂರು ವರ್ಷದ ಆಡಿಟ್ ವರದಿಯನ್ನು ಸಲ್ಲಿಸುವುದು.
4. ಏಜೆನ್ಸಿಯಿಂದ ಒದಗಿಸಲ್ಪಟ್ಟ ಕೆಲಸಗಾರರಿಗೆ ಇಲಾಖೆ ವತಿಯಿಂದ ಯಾವುದೇ ನೇಮಕಾತಿ ಆದೇಶ ನೀಡಲಾಗುವುದಿಲ್ಲ.
5. ಬೆಂಗಳೂರು ದಕ್ಷಿಣ ಜಿಲ್ಲೆಯ ಡಿ.ಪಿ.ಓ ಕಛೇರಿ ಮತ್ತು ಬಿ.ಆರ್.ಸಿ ಕೇಂದ್ರಗಳಲ್ಲಿ ಭದ್ರತಾ ಕಾವಲುಗಾರರು ಪ್ರತಿ ನಿತ್ಯ ಸಂಜೆ 5.30 ಗಂಟೆಯಿಂದ ಮಾರನೆಯ ದಿನ ಬೆಳಿಗ್ಗೆ 9.30 ವರೆಗೆ ಕೆಲಸ ನಿರ್ವಹಿಸುವುದು. ಅಟೆಂಡರ್ ರವರು ಡಿ.ಪಿ.ಓ ಕಛೇರಿಯಲ್ಲಿ ಬೆಳಿಗ್ಗೆ 9.30 ರಿಂದ ಸಂಜೆ 6.00 ಗಂಟೆಯವರೆಗೆ ಕೆಲಸ ನಿರ್ವಹಿಸುವುದು. ಹೀಗೆ ಒದಗಿಸಿದ ಭದ್ರತಾ ಸಿಬ್ಬಂದಿಗಳು ಸದೃಢರಾಗಿದ್ದು, ನಿಷ್ಠೆ ಹಾಗೂ ಸಮರ್ಪಣಾ ಭಾವದಿಂದ ಕೆಲಸ ನಿರ್ವಹಿಸುವವರಾಗಿರತಕ್ಕದ್ದು.
6. ಭದ್ರತಾ ಸಿಬ್ಬಂದಿಯವರು ಸಮವಸ್ತ್ರ, ಷೂ, ಸಾಕ್ಸ್, ಲಾಠಿ ಮತ್ತು ವಿಷಲ್ ಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
7. ಸಂಸ್ಥೆಗಳಿಂದ ಒದಗಿಸಲ್ಪಟ್ಟ ಕೆಲಸಗಾರರಿಗೆ ಇಲಾಖೆಯಲ್ಲಿ ಖಾಯಂ ಅಥವಾ ಇತರೆ ಸೌಲಭ್ಯಗಳನ್ನು ಒದಗಿಸುವುದಿಲ್ಲ.
8. ಸಿಬ್ಬಂದಿ ವರ್ಗದವರಿಗೆ ಆಗುವ ಯಾವುದೇ ರೀತಿಯ ಹಾನಿಗೆ ಸಿಬ್ಬಂದಿಯ ಸೇವೆಯನ್ನು ಒದಗಿಸಿರುವ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.
9. ಸಿಬ್ಬಂದಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪವಿದ್ದಲ್ಲಿ ಪೂರ್ವ ಸೂಚನೆಯಿಲ್ಲದೇ ನೀಡಲಾದ ಆದೇಶವನ್ನು ರದ್ದುಪಡಿಸಲಾಗುವುದು.

10. ಸಂಸ್ಥೆಯವರು ಅನುಭವವುಳ್ಳ ಕೆಲಸಗಾರರನ್ನು ಒದಗಿಸುವುದು.
11. ಸದರಿ ಹುದ್ದೆಗಳು ತಾತ್ಕಾಲಿಕವಾಗಿರುತ್ತದೆ.
12. ಈ ಕಛೇರಿಯಲ್ಲಿ ವಿಧಿಸುವ ಷರತ್ತುಗಳು ಹಾಗು ತೀರ್ಮಾನವೇ ಅಂತಿಮವಾಗಿರುತ್ತದೆ.
13. ನೌಕರರಿಗೆ ಪ್ರಾವಿಡೆಂಟ್ ಫಂಡ್ ಮತ್ತು ಇಎಸ್‌ಐ ಸೌಲಭ್ಯವನ್ನು ಕಡ್ಡಾಯವಾಗಿ ಸಂಸ್ಥೆಯವರು ಒದಗಿಸುವುದು. ಈ ಬಗ್ಗೆ ಇಲಾಖೆಯು ಯಾವುದೇ ರೀತಿಯಲ್ಲಿ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
14. ಸಂಸ್ಥೆಯು ಹಾಲಿ ಯಾವ ಯಾವ ಸರ್ಕಾರಿ ಹಾಗು ಇತರೆ ಕಛೇರಿಗಳಲ್ಲಿ ಸೇವೆ ನೀಡುತ್ತಿರುತ್ತಾರೆ ಎಂಬುದಕ್ಕೆ ಮಾಹಿತಿ ಒದಗಿಸುವುದು.
15. ದರಪಟ್ಟಿಯಲ್ಲಿ ನೀಡಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ ನೌಕರರ ಮಾಹೆಯಾನ ಸಂಭಾವನೆ, ಸರ್ವಿಸ್ ಚಾರ್ಜ್,ಸೇವಾ ತೆರಿಗೆ ಇವುಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.
16. ಸಿಬ್ಬಂದಿಯ ಕರ್ತವ್ಯ ಲೋಪ, ನಿರ್ಲಕ್ಷತೆ ಅಜಾಗರೂಕತೆಯಿಂದ ಇಲಾಖೆಗೆ ಆಗುವ ನಷ್ಟಕ್ಕೆ ಸಂಸ್ಥೆಯನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವ್ವದು.ಸಂಸ್ಥೆಯು PAN ಸಂಖ್ಯೆಯನ್ನು ಕಡ್ಡಾಯವಾಗಿ ನೀಡತಕ್ಕದ್ದು.
17. ನಿಗದಿತ ನಮೂನೆಯಲ್ಲಿ ಬ್ಯಾಂಕ್ ಗ್ಯಾರೆಂಟಿಯನ್ನು ಕೊಟೇಷನ್‌ನಲ್ಲಿ ಯಶಸ್ವಿಯಾದ ಸಂಸ್ಥೆ ನೀಡತಕ್ಕದ್ದು.

<u>ಗುತ್ತಿಗೆ ಕರಾರು ಒಪ್ಪಂದವನ್ನು ಸಹಿಮಾಡುವುದು</u>

ಯಶಸ್ವಿ ಗುತ್ತಿಗೆದಾರರಿಗೆ ಕಾರ್ಯದೇಶ ನೀಡಲಾಗುವುದು ಕಾರ್ಯದೇಶ ನೀಡಿದ ನಂತರ ಇಲಾಖೆಯೊಂದಿಗೆ ನಿಗಧಿತ ನಮೂನೆಯಲ್ಲಿ ನಿಬಂಧನೆಗಳೊಂದಿಗೆ ಹಾಗೂ ಪ್ರತ್ಯೇಕ ವಿಧಿಸಬಹುದಾದ ಷರತ್ತುಗಳನ್ನೊಳಗೊಂಡ ಕರಾರುಪತ್ರಕ್ಕೆ ಸಹಿಮಾಡತಕ್ಕದ್ದು. ನಿಬಂಧನೆಗಳಲ್ಲಿ ಯಾವುದೇ ರೀತಿಯ ಬದಲಾವಣೆ ಇದ್ದಲ್ಲಿ ಅದನ್ನು ಪುನಃ ಇಲಾಖೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಂಡ ನಂತರವೇ ಅನುಷ್ಠಾನಗೊಳಿಸಬೇಕು.

**<u>ಏಜೆನ್ಸಿಯವರಿಗೆ ಸೂಚನೆಗಳು ಮತ್ತು ಷರತ್ತುಗಳು</u>**

ಅ) ಏಜೆನ್ಸಿಯವರು ಮಾನವ ಹೊರ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ಕನಿಷ್ಠ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು.

- ಕಾರ್ಮಿಕ ಕಾಯ್ದೆ
- ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಕಾಯ್ದೆ
- ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ
- ಆದಾಯ ತೆರಿಗೆ ಕಾಯ್ದೆ
- ಸೇವಾ ತೆರಿಗೆ ಕಾಯ್ದೆ
- ಪ್ಯಾನ ಕಾರ್ಡ್ ಹೊಂದಿರಬೇಕು
- ಸಂಸ್ಥೆಯು ಪ್ರೈವೆಟ್ ಸೆಕ್ಯುರಿಟಿ ಏಜೆನ್ಸೀಸ್ (ರೆಗುಲೇಷನ್) ಆಕ್ಟ್ 2005 ಮತ್ತು ಪ್ರೈವೆಟ್ ಸೆಕ್ಯುರಿಟಿ ಏಜೆನ್ಸೀಸ್(ಕರ್ನಾಟಕ) ರೂಲ್ಸ್ 2008 ನಿಯಮಗಳನುಸಾರ ನೊಂದಣಿಯಾಗಿರಬೇಕು.

- ಮಾನವ ಸಂಪನ್ಮೂಲ ಏಜೆನ್ಸಿಯಾಗಿ ವಿವಿಧ ಸಂಸ್ಥೆಗಳಿಗೆ ಇತ್ತೀಚಿನ ಹಿಂದಿನ 5 ವರ್ಷಗಳಲ್ಲಿ ಕನಿಷ್ಠ 3 ವರ್ಷಗಳಲ್ಲಿ ಪ್ರತಿ ವರ್ಷ ಸರಾಸರಿ 100 ಸಿಬ್ಬಂದಿಗಳನ್ನು ಒದಗಿಸಿದ ಅನುಭವ ಹೊಂದಿರಬೇಕು.
- ಹೊರಸಂಪನ್ಮೂಲ ಏಜೆನ್ಸಿಯಾಗಿ ಈ ಹಿಂದೆ ಮಾನವ ಸಂಪನ್ಮೂಲ ಸೇವೆಯನ್ನು ವಿವಿಧ ಸರ್ಕಾರಿ ಮತ್ತು ಅರೆಸರ್ಕಾರಿ ಇಲಾಖೆಗಳಿಗೆ ನೀಡಿರಬೇಕು ಮತ್ತು ಈ ಬಗ್ಗೆ ನೀಡಿರುವ ವಿವರ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸಬೇಕು.
- ಸಂಸ್ಥೆಯು ಕಳೆದ 5 ವರ್ಷಗಳಲ್ಲಿ ವ್ಯವಹರಿಸುವ ವಾರ್ಷಿಕ ವಹಿವಾಟುಗಳ ಮೊತ್ತ ಕಳೆದ 3 ವರ್ಷಗಳಲ್ಲಿ ಪ್ರತೀ ವರ್ಷ ರೂ.20.00 ಲಕ್ಷ ಇರತಕ್ಕದ್ದು. ವಿವರಗಳು ಮತ್ತು ದಾಖಲೆಗಳ ಪ್ರತಿಯನ್ನು ಸಲ್ಲಿಸಬೇಕು.
- ಆದಾಯ ತೆರಿಗೆ ಮತ್ತು ಸೇವಾ ತೆರಿಗೆ ರಿಟರ್ನ್ಸ್ ಫೈಲ್ ಮಾಡಿರುವ ಬಗ್ಗೆ ಕಳೆದ ಮೂರು ಹಿಂದಿನ ವರ್ಷಗಳ ದಾಖಲೆಗಳನ್ನು ಸಲ್ಲಿಸಬೇಕು.
- ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೊಂದಣಿ ಮಾಡಿದ ಬಗ್ಗೆ ನೊಂದಣಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಸಲ್ಲಿಸಬೇಕು.
- ಗುತ್ತಿಗೆ ನೀಡುತ್ತಿರುವ ಮೊತ್ತದ ಶೇಕಡ 5 ರಷ್ಟು ಹಣವನ್ನು ಡಿ.ಡಿ. ಅಥವಾ ಬ್ಯಾಂಕ್ ಗ್ಯಾರೆಂಟಿ ಮೂಲಕ ಒಪ್ಪಂದ ಕರಾರು ಸಹಿ ಮಾಡುವ ಸಮಯದಲ್ಲಿ ಗ್ಯಾರೆಂಟಿಯಾಗಿ ಸಲ್ಲಿಸಬೇಕು.

- ಅನುಬಂಧ 1 ರಲ್ಲಿ ನೀಡಿರುವ ಸಂಭಾವನೆ ವಿವರಗಳಲ್ಲಿ ಯಾವುದೇ ಬದಲಾವಣೆಯಿಲ್ಲದೇ ಸಂಸ್ಥೆಯವರು ಅನ್ವಯಿಸಬಹುದಾದ ಸೇವಾ ಶುಲ್ಕವನ್ನು ಮತ್ತು ಟಿಡಿಎಸ್ ಗಮನದಲ್ಲಿರಿಸಿಕೊಂಡು ದರಪಟ್ಟಿ ಸಲ್ಲಿಸುವುದು. ಸೇವಾ ಶುಲ್ಕ ಶೂನ್ಯ ನಮೂದಿಸಿ ದರಪಟ್ಟಿ ಸಲ್ಲಿಸುವ ಸಂಸ್ಥೆಯ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು. ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಕೊಟೇಷನ್‌ನ್ನು ತಿರಸ್ಕರಿಸಲಾಗುವುದು.

**ಸಂಸ್ಥೆಯ ಜವಾಬ್ದಾರಿಗಳು:**

- ಒಪ್ಪಂದದ ಪ್ರಕಾರ ಅನುಮೋದನೆಯಾದ ಅವಧಿಗೆ ವಿವಿಧ ಸಿಬ್ಬಂದಿಗಳ ಸೇವೆಯನ್ನು ಒದಗಿಸಬೇಕು.
- ಕೆಲಸದ ಒತ್ತಡವಿರುವ ದಿನಗಳಲ್ಲಿ ಕಛೇರಿ ಅವಧಿಯ ನಂತರವೂ ಕೆಲವು ಗಂಟೆಗಳ ಕಾಲ ಕಾರ್ಯನಿರ್ವಹಿಸಬೇಕು.
- ಸಂಸ್ಥೆಯು ಒದಗಿಸುವ ನೌಕರರಿಗೆ ಸರ್ಕಾರಿ ನೌಕರರು ಪಡೆಯುತ್ತಿರುವ ಯಾವುದೇ ಸೌಲಭ್ಯಗಳು ಅನ್ವಯಿಸುವುದಿಲ್ಲ.
- ಈ ರೀತಿ ಸಿಬ್ಬಂದಿಯನ್ನು ಒದಗಿಸುವಾಗ ಮೇಲೆ ನಿಗದಿಪಡಿಸಿರುವ ವಿದ್ಯಾರ್ಹತೆ ಹಾಗೂ ಅನುಭವ ವಿರುವ ಸಿಬ್ಬಂದಿಯನ್ನು ಒದಗಿಸಬೇಕು.
- ಏಜೆನ್ಸಿಯು ಹೆಚ್ಚು ಅನುಭವವುಳ್ಳ ಸೇವಾ ಸಿಬ್ಬಂಧಿಯನ್ನ ನೀಡಬೇಕು. ಯಾವುದೇ ಕಾರಣಕ್ಕೂ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರದೆ ಏಜೆನ್ಸಿಯು ತನ್ನ ಸಿಬ್ಬಂದಿಯನ್ನು ಹಿಂಪಡೆಯಬಾರದು ಅಥವಾ ಬದಲಾಯಿಸಬಾರದು.
- ಏಜೆನ್ಸಿಯವರು ನಿಯೋಜಿಸಲ್ಪಡುವ ಸಿಬ್ಬಂದಿ ವರ್ಗದವರು ಪ್ರತಿ ತಿಂಗಳು ಒಂದು ರಜೆಯನ್ನು ಪಡೆಯಲು ಅರ್ಹರಿರುತ್ತಾರೆ, ಆದರೆ 15 ದಿನಗಳಿಗಿಂತ ಕಡಿಮೆ ಅವಧಿಯ ಸಿಬ್ಬಂದಿಯು ರಜೆ ಹೋದಲ್ಲಿ ಅವರ ವೇತನ ಕಡಿತಗೊಳಿಸಲಾಗುವುದು. ಒಂದು ವೇಳೆ 15ದಿನಗಳಿಗಿಂತ ಹೆಚ್ಚು ರಜೆಯನ್ನು ಸಿಬ್ಬಂದಿಯು ಪಡೆಯುವುದಿದ್ದಲ್ಲಿ ಬದಲಿ ಸಿಬ್ಬಂದಿಯ ವ್ಯವಸ್ಥೆಯನ್ನು ಸಂಸ್ಥೆಯವರು ಮಾಡಬೇಕು. ಏಜೆನ್ಸಿ ನೀಡುವ ಸಿಬ್ಬಂದಿಗಳಿಗೆ ಅವರ ಸೇವಾ ಅವಧಿಯಲ್ಲಿ ಪ್ರಾಣಾಪಾಯ ಆಕಸ್ಮಿಕ ಘಟನೆಗಳು ಸಂಭವಿಸಿದಲ್ಲಿ ಅದಕ್ಕೆ ಸಂಸ್ಥೆಯವರೇ ಹೊಣೆಗಾರರಾಗಿದ್ದು, ಸಂಸ್ಥೆಯವರೇ ಪರಿಹಾರ ನೀಡಲು ಬದ್ಧರಾಗಿರುತ್ತಾರೆ.
- ನಿಯೋಜಿಸುವ ಸಿಬ್ಬಂದಿಗಳು ಇಲಾಖೆಯ ಆಸ್ತಿ-ಪಾಸ್ತಿಗಳಿಗೆ ನಷ್ಟ ಉಂಟು ಮಾಡಿದಲ್ಲಿ ಅದನ್ನು ಏಜೆನ್ಸಿಯವರೇ ಭರಿಸಬೇಕಾಗುತ್ತದೆ.
- ಸಂಸ್ಥೆಯವರು ನಿಯೋಜಿಸುವ ಸಿಬ್ಬಂದಿಗಳ ವಿಳಾಸ, ಭಾವ ಚಿತ್ರಗಳನ್ನು ಇಲಾಖೆಗೆ ನೀಡತಕ್ಕದ್ದು.

**ಸಿಬ್ಬಂದಿ ವೇತನ ಜವಾಬ್ದಾರಿ:**

- ಇಲಾಖೆಯು ವಿವಿಧ ವರ್ಗದ ಸಿಬ್ಬಂದಿಗಳಿಗೆ ನೀಡುವ ವೇತನ, ಇ.ಎಸ್.ಐ ಮತ್ತು ಇ.ಪಿ.ಎಫ್ ಕಡಿತಗಳು, ಸೇವಾ ತೆರಿಗೆ ಕಡಿತಗಳ ವಿವರಗಳನ್ನು ಅನುಬಂಧ(1) ರಲ್ಲಿ ನೀಡಲಾಗಿದೆ. ಅದರಂತೆ, ಪ್ರತಿ ಸಿಬ್ಬಂದಿಗೆ ಅವರ ಹೆಸರಿನ ಮುಂದೆ ತೋರಿಸಿರುವ ವಿವರಗಳಂತೆ ಮನೆಗೆ ತೆಗೆದುಕೊಂಡು ಹೋಗುವ ವೇತನವನ್ನು ಆಯಾ ಹುದ್ದೆಗಳನುಸಾರ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಚೆಕ್ ಮೂಲಕ ವೇತನವನ್ನು ಏಜೆನ್ಸಿಯವರು ಪಾವತಿಸಬೇಕು. ಮುಂದಿನ ತಿಂಗಳ-ವೇತನ ಸಮಯದಲ್ಲಿ ಸಿಬ್ಬಂದಿಗಳ ಹಿಂದಿನ ತಿಂಗಳ ಪಾಸ್‌ಪುಸ್ತಕದ ಜೆರಾಕ್ಸ್ ಪ್ರತಿ ಕಡ್ಡಾಯವಾಗಿ ನೀಡತಕ್ಕದ್ದು.
- ಸಿಬ್ಬಂದಿ ವೇತನ ಮತ್ತು ಇತರೆ ಕಡಿತಗಳನ್ನು ಏಜನ್ಸಿಯವರು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣದಿಂದ ಭರಿಸಿ ಆ ಕೆಲಸದ ತಿಂಗಳು ಮುಗಿದ ನಂತರ ಇಲಾಖೆಗೆ ಬಿಲ್ ಸಲ್ಲಿಸುವ ಮುಖಾಂತರ ಹಣ ಮರುಪಾವತಿ ಪಡೆಯತಕ್ಕದ್ದು.
- ಪ್ರತಿ ಸಿಬ್ಬಂದಿಗೆ ಆಗುವ ವೇತನದ ವೆಚ್ಚವನ್ನು ಇಲಾಖಾ ವತಿಯಿಂದ ನೀಡಲಾಗುವುದು ಹಾಗೂ ಎಂಪ್ಲಾಯರ್ಸ್ ವಂತಿಕೆಯಿಂದ ಇ.ಪಿ.ಎಫ್, ಇ.ಎಸ್.ಐ ಸೇವಾತೆರಿಗೆ ಮತ್ತು ಸೇವಾ ಶುಲ್ಕ ಇಲಾಖೆಯಿಂದ ನೀಡಲಾಗುವುದು.
- ಸಿಬ್ಬಂದಿಯ ವೇತನದಲ್ಲಿ ನೌಕರನ ವಂತಿಕೆಯಿಂದ ಇ.ಪಿ.ಎಫ್, ಇ.ಎಸ್.ಐ ಮತ್ತು ವೃತ್ತಿಪರ ತೆರಿಗೆಗಳನ್ನು ಮಾತ್ರ ಕಡಿತಗೊಳಿಸತಕ್ಕದ್ದು.
- ಪ್ರತಿಯೊಬ್ಬ ಸಿಬ್ಬಂದಿ ಹೆಸರಿನಲ್ಲಿ ಇ.ಪಿ.ಎಫ್, ಇ.ಎಸ್.ಐ ಖಾತೆಗಳನ್ನು ತೆರೆದು ಆ ಖಾತೆಗಳಲ್ಲಿ ಸಿಬ್ಬಂದಿಯ ಭಾಗ ಮತ್ತು ಎಂಪ್ಲಾಯರ್ಸ್ ಭಾಗದ ಹಣವನ್ನು ಪ್ರತಿ ತಿಂಗಳು ತಪ್ಪದೇ ಜಮಾ ಮಾಡಬೇಕು.
- ಏಜೆನ್ಸಿಯವರು ಆಯಾ ತಿಂಗಳು ಇ.ಪಿ.ಎಫ್, ಇ.ಎಸ್.ಐ ಸೇವಾತೆರಿಗೆಗಳ ದಾಖಲೆಗಳನ್ನು ಸಲ್ಲಿಸಿ ಹಿಂದಿನ ತಿಂಗಳ ಹಣವನ್ನು ಪಡೆಯತಕ್ಕದ್ದು.

- ಏಜೆನ್ಸಿಯವರು ಕನಿಷ್ಠ 2 ತಿಂಗಳ ಅವಧಿಯಲ್ಲಿ ಪ್ರತಿಯೊಬ್ಬ ಸಿಬ್ಬಂದಿಯ ಇ.ಪಿ.ಎಫ್, ಇ.ಎಸ್.ಐ ಖಾತೆಗಳನ್ನು ತೆರೆಯಬೇಕು. ಒಂದು ವೇಳೆ ಖಾತೆ ತೆರೆಯದಿದ್ದಲ್ಲಿ ಇದು ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಕರಾರು ಒಪ್ಪಂದವನ್ನು ರದ್ದು ಮಾಡಲಾಗುವುದು ಮತ್ತು ಈ ಖಾತೆ ತೆರೆಯುವವರೆಗಿನ ಅವಧಿಯಲ್ಲಿ ಯಾವುದೇ ಕಡಿತಗಳನ್ನು ಏಜೆನ್ಸಿಯವರು ಕಟಾವು ಮಾಡಬಾರದು ಮತ್ತು ಈ ಸಂಬಂಧ ಹಣವನ್ನು ನೌಕರರಿಗೆ ವೇತನದಲ್ಲಿ ಸೇರಿಸಿ ನೀಡಬೇಕು. ವೈಯಕ್ತಿಕ ಖಾತೆಗಳನ್ನು ತೆರೆಯುವ ತನಕ ಇಲಾಖೆಯೂ ಸಹ ತನ್ನ ವಂತಿಕೆಯನ್ನು ಟೆಂಡರ್‌ದಾರರಿಗೆ ನೀಡುವಂತಿಲ್ಲ.

**ಸಿಬ್ಬಂದಿ ವೇತನದಲ್ಲಿ ಕಡಿತಗೊಳಿಸಬಹುದಾದ ಬಾಬ್ತುಗಳು :**

1. ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್)
   ಒಬ್ಬ ನೌಕರನ ಮೂಲ ವೇತನ ಹಾಗೂ ದಿನಭತ್ಯೆ ಸೇರಿ ರೂ.6500/-ಗಳಿಗಿಂತ ಹೆಚ್ಚು ವೇತನ ಪಡೆಯುತ್ತಿದ್ದಲ್ಲಿ ಇ.ಪಿ.ಎಫ್ ವಂತಿಗೆ ಕಡ್ಡಾಯವಿರುವುದಿಲ್ಲ. ಆದ್ದರಿಂದ ಅಂತಹ ನೌಕರರ ಇ.ಪಿ.ಎಫ್ ವಂತಿಗೆಯನ್ನು ಕಡಿತಗೊಳಿಸಬಾರದು. ರೂ.6500/-ಗಳಿಗಿಂತ ಕಡಿಮೆ ವೇತನ ಪಡೆಯುತ್ತಿದ್ದಲ್ಲಿ ನೌಕರನ ಬಾಬ್ತು ಒಟ್ಟು ರೂ.25.61% ಇ.ಪಿ.ಎಫ್ ಕಡಿತ ಮಾಡಬೇಕು. ಇದರಲ್ಲಿ 12% ನೌಕರನ ವಂತಿಗೆಯಾಗಿದ್ದು, ಉಳಿದ 13.61% ಎಂಪ್ಲಾಯರ್ಸ್ ವಂತಿಗೆಯಾಗಿದ್ದು, ಇದನ್ನು ಇಲಾಖೆಯು ಭರಿಸುವುದು. ಈ ರೀತಿ ಕಟಾವು ಮಾಡಿದ ನೌಕರನ ವಂತಿಗೆ ಮತ್ತು ಎಂಪ್ಲಾಯರ್ಸ್ ವಂತಿಗೆಯನ್ನು ಪ್ರತಿ ನೌಕರನಿಗೆ ಇ.ಪಿ.ಎಫ್ ಇಲಾಖೆಯು ನೀಡುವ ನೌಕರನ ವೈಯಕ್ತಿಕ ಖಾತೆಯಲ್ಲಿ ಜಮಾ ಮಾಡಬೇಕು.
2. ರಾಜ್ಯ ಕಾರ್ಮಿಕ ವಿಮೆ(ಇ.ಎಸ್.ಐ)
   ಪ್ರತಿ ನೌಕರನ ಒಟ್ಟು ಸಂಬಳ ಅಂದರೆ ಮೂಲವೇತನ, ದಿನಭತ್ಯೆ ಇತರೆ ಭತ್ಯೆಗಳನ್ನೊಳಗೊಂಡಂತೆ ರೂ.10000/-ಕ್ಕಿಂತ ವೇತನ ಕಡಿಮೆ ಇದ್ದಲ್ಲಿ ಇ.ಎಸ್.ಐ ವಂತಿಗೆಯನ್ನು ಕಟಾವು ಮಾಡಬೇಕು. ಒಂದು ವೇಳೆ ರೂ.10000/-ಕ್ಕಿಂತ ವೇತನ ಹೆಚ್ಚು ಪಡೆಯುತ್ತಿದ್ದಲ್ಲಿ ಕಟಾವುಮಾಡುವುದು ಕಡ್ಡಾಯವಲ್ಲ. ಈ ರೀತಿ ರೂ.10000/-ಗಳಿಗಿಂತ ಕಡಿಮೆ ವೇತನ ಪಡೆಯುವ ನೌಕರನಿಗೆ ಒಟ್ಟು 6.50% ಇ.ಎಸ್.ಐ ವಂತಿಗೆಯನ್ನು ಕಡಿತಗೊಳಿಸಬೇಕು. ಇದರಲ್ಲಿ 1.75% ನೌಕರನ ವಂತಿಗೆ, 4.75% ಎಂಪ್ಲಾಯರ್ಸ್ ವಂತಿಗೆಯಾಗಿರುತ್ತದೆ, ಇ.ಎಸ್.ಐ ಇಲಾಖೆಯಲ್ಲಿ ಪ್ರತಿ ನೌಕರನ ಬಗ್ಗೆ ಒಂದು ಪ್ರತ್ಯೇಕ ಖಾತೆ ಸಂಖ್ಯೆ ಪಡೆದು ಆ ಖಾತೆಗೆ ಏಜೆನ್ಸಿಯವರು ಜಮಾ ಮಾಡಬೇಕು. ಇಲ್ಲವಾದಲ್ಲಿ ಈ ವಂತಿಗೆಗಳನ್ನು ಕಟಾವುಮಾಡಬಾರದು. ಒಂದು ವೇಳೆ ಕಡಿತಗಳನ್ನು ಕಟಾವು ಮಾಡಿ ಸಂಬಂಧಪಟ್ಟ ಇಲಾಖೆಗಳಿಗೆ ಜಮಾ ಮಾಡದಿದ್ದಲ್ಲಿ ಇದು ನಿಯಮ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.
3. ವೃತ್ತಿತೆರಿಗೆ:
   ನೌಕರನ ಒಟ್ಟು ವೇತನ ರೂ.10000/-ಗಳಿಗಿಂತ ಕಡಿಮೆ ಇರುವವರು ವೃತ್ತಿತೆರಿಗೆ ಅನ್ವಯವಾಗುವುದಿಲ್ಲ. ಆದರೆ ರೂ.10000/-ಗಳಿಗಿಂತ ಹೆಚ್ಚುಪಡೆಯುವವರಿಗೆ ಪ್ರತಿ ತಿಂಗಳು ರೂ.150/-ಗಳನ್ನು ಹಾಗೂ 15000/-ಗಳಿಗಿಂತ ಹೆಚ್ಚು ವೇತನ ಪಡೆಯುವವರಿಗೆ ರೂ.200/-ಗಳನ್ನು ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು.
4. ಸೇವಾ ತೆರಿಗೆ:
   ಏಜೆನ್ಸಿಯವರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಒಟ್ಟು ವೇತನಕ್ಕೆ 10.3% ರಷ್ಟು ಸೇವಾ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಅದಕ್ಕಾಗಿ ಪ್ರತಿ ತಿಂಗಳು ಸೇವಾ ತೆರಿಗೆ ಪಾವತಿಸಿದ ಚಲನ್‌ಗಳನ್ನು ಇಲಾಖೆಗೆ ಹಾಜರುಪಡಿಸಬೇಕು.

   - ಏಜೆನ್ಸಿಯವರು ಪ್ರತಿ ತಿಂಗಳು ನೌಕರರಿಗೆ ಸಂಬಂಧಿಸಿದಂತೆ ಅನುಬಂಧ(1) ರಲ್ಲಿ ಹೇಳಿರುವ ವಿವರದಂತೆ ವೇತನ ನೀಡುವುದು ಮತ್ತು ಕಡಿತಗಳನ್ನು ಸಂಬಂಧಪಟ್ಟ ನೌಕರರ ವೈಯುಕ್ತಿಕ ಖಾತೆಗಳಿಗೆ ಜಮಾ ಮಾಡುವುದು. ಇವೆಲ್ಲವನ್ನು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣ ಭರಿಸಿ ಏಜೆನ್ಸಿಯವರು ಹಣ ಪಾವತಿಸತಕ್ಕದ್ದು. ಈ ರೀತಿ ಪಾವತಿಸಿದ ಕಡಿತಗಳ ವಿವರಗಳನ್ನು ಆ ತಿಂಗಳು ಮುಗಿದ ನಂತರ ಸಂಬಂಧಪಟ್ಟ ವೋಚರ್‌ಗಳು, ಚಲನ್‌ಗಳ ದಾಖಲೆಗಳನ್ನು ಹಾಜರುಪಡಿಸಿ ಈ ಎಲ್ಲಾ ಹಣವನ್ನು ಇಲಾಖೆಯಿಂದ ಮರುಪಾವತಿ ಮಾಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಮರುಪಾವತಿ ಅಲ್ಲದೆ ಮುಂಗಡವಾಗಿ ಏಜೆನ್ಸಿಯವರಿಗೆ ಹಣವನ್ನು ನೀಡಲಾಗುವುದಿಲ್ಲ. ಏಜೆನ್ಸಿಯವರು ಯಾವುದೇ ಕಾರಣಕ್ಕೂ 2 ತಿಂಗಳಿಗೂ ಹೆಚ್ಚು ಕಾಲ ವೇತನ ಪಾವತಿಯನ್ನು ವಿಳಂಬ ಮಾಡುವಂತಿಲ್ಲ. ಹಾಗೆ ಮಾಡಿದಲ್ಲಿ ಇದು ಷರತ್ತು ಉಲ್ಲಂಘನೆ ಎಂದು ಪರಿಗಣಿಸಿ ಕರಾರು ಒಪ್ಪಂದ ರದ್ದು ಮಾಡಲಾಗುವುದು.
   - ಇ.ಎಸ್.ಐ, ಇ.ಪಿ.ಎಫ್, ವೃತ್ತಿ ತೆರಿಗೆ ಮತ್ತು ಸೇವಾ ತೆರಿಗೆಗಳ ಕಡಿತಗಳನ್ನು ನೌಕರನ ವಂತಿಗೆಯಿಂದ ಕಟಾವು ಮಾಡಿ ಅವುಗಳನ್ನು ಜಮಾ ಮಾಡದಿದ್ದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ ಮತ್ತು ಈ

ಹಣ ದುರುಪಯೋಗದ ಮೇಲೆ ಏಜೆನ್ಸಿಯವರ ಮೇಲೆ ಇಲಾಖೆಯು ಕ್ರಿಮಿನಲ್ ಮೊಕದ್ದಮೆ ಹೂಡಲು ಹಕ್ಕುವುಳ್ಳದ್ದಾಗಿರುತ್ತದೆ,

- ಏಜೆನ್ಸಿಯವರು ತಾವು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಾರದು ಮತ್ತು ಉಪ ಗುತ್ತಿಗೆ ನೀಡಬಾರದು. ಇದು ಷರತ್ತಿನ ಉಲ್ಲಂಘನೆ ಆಗುತ್ತದೆ.
- ನೌಕರರಿಗೆ ಚೆಕ್ ಮುಖಾಂತರ ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ತಪ್ಪದೇ ಪಾವತಿಸಬೇಕು. ವಿವಿಧ ವಂತಿಕೆಗಳ ಕಡಿತಗಳನ್ನು ಮಾಡಿದ ಬಗ್ಗೆ ನೌಕರನಿಗೆ ಪ್ರತಿ 6ತಿಂಗಳಿಗೊಮ್ಮೆ ಸಂಬಂಧಪಟ್ಟ ಇಲಾಖೆಗಳಿಂದ ಸ್ಟೇಟ್‌ಮೆಂಟ್ ಪಡೆದು ನೀಡುವುದು.
- ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿಯೂ ಯಶಸ್ವಿ ಗುತ್ತಿಗೆದಾರರು ಗುತ್ತಿಗೆ ಕರಾರು ಒಪ್ಪಂದಕ್ಕೆ ಸಹಿ ಮಾಡಬೇಕು.
- ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಇಲಾಖೆಯು ಏಜೆನ್ಸಿಯವರಿಗೆ ಒಂದು ತಿಂಗಳ ಲಿಖಿತ ನೋಟೀಸ್ ನೀಡಿ ಗುತ್ತಿಗೆಯನ್ನು ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಇದೇ ರೀತಿ ಗುತ್ತಿಗೆದಾರರು ಗುತ್ತಿಗೆ ಕಾರ್ಯವನ್ನು ನಿಲ್ಲಿಸುವುದಿದ್ದಲ್ಲಿ ಕನಿಷ್ಠ 2 ತಿಂಗಳ ಮುಂದೆ ನೋಟೀಸ್‌ನ್ನು ಇಲಾಖೆಯ ಅಧಿಕಾರಿಗಳಿಗೆ ನೀಡುವುದು.
- ಇಲಾಖೆ ಮತ್ತು ಸಂಸ್ಥೆಯವರ ಮದ್ಯೆ ಗುತ್ತಿಗೆ ಅವಧಿಯಲ್ಲಿ ಅಥವಾ ಗುತ್ತಿಗೆ ನಂತರ ಉದ್ಭವಿಸಬಹುದಾದ ತಕರಾರುಗಳನ್ನು ಸ್ಥಳೀಯ ನ್ಯಾಯಾಲಯದಲ್ಲಿ ಮಾತ್ರ ಬಗೆಹರಿಸಿಕೊಳ್ಳತಕ್ಕದ್ದು.

ಕೊಟೇಷನ್‌ಗಳನ್ನು ದಿನಾಂಕ:21/10/2011 ರಂದು ಸಂಜೆ 5.00 ಗಂಟೆಯೊಳಗೆ ಮೊಹರಾದ ಲಕೋಟೆಯಲ್ಲಿ ಸಲ್ಲಿಸಬೇಕು. ಲಕೋಟೆಯ ಮೇಲೆ "ಮಾನವ ಸಂಪನ್ಮೂಲಗಳನ್ನು ಒದಗಿಸಲು ಲಕೋಟೆ" ಎಂದು ಬರೆದಿರಬೇಕು.

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ.

ಅನುಬಂಧ-I

## Salary Components For Outsourcing staff with all contributions and deductions

| | | Designation | | |
|---|---|---|---|---|
| Sl.NO | DETAILS OF WAGE | DEO | SECURITY | GROUP-D |
| 1 | BASIC | 5000.00 | 4500.00 | 3050.00 |
| 2 | DA | 3350.00 | 3015.00 | 2043.50 |
| | **TOTAL -A** | **8350.00** | **7515.00** | **5093.50** |
| | | | | |
| | Deduction Employees Contribution | | | |
| | PF (12%) | 0 | 0 | 611.22 |
| 3 | ESI (1.75%) | 146.13 | 131.51 | 89.14 |
| | | | | |
| | **Total Deduction** | **146.13** | **131.51** | **700.36** |
| | | | | |
| | **TAKE HOME SALARY** | **8203.88** | **7383.49** | **4393.14** |
| | | | | |
| | Employers share contribution | | | |
| | EPF (13.61%) | | | 693.23 |
| 4 | ESI (4.75%) | 396.63 | 356.96 | 241.94 |
| | **TOTAL -B** | **396.63** | **356.96** | **935.17** |
| | | | | |
| | **TOTAL A+B** | **8746.63** | **7871.96** | **6028.67** |
| | | | | |
| | Service tax 10.3% TOTAL-C | 900.90 | 810.81 | 620.95 |
| | | | | |
| | **Grand Total (A+B+C)** | **9647.53** | **8682.77** | **6649.62** |

ಅನುಬಂಧ(2)

ಇಂದ,

ಇವರಿಗೆ,
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ.

ಮಾನ್ಯರೇ,

ಈ ಕೆಳಗೆ ಸಹಿ ಮಾಡಿರುವ ನಾವು ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಈ ಕೆಳಗಿನಂತೆ ನಮ್ಮ ದರಪಟ್ಟಿ ಸಲ್ಲಿಸುತ್ತಿದ್ದು ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಹುದ್ದೆ ಮತ್ತು ವಿದ್ಯಾರ್ಹತೆ | ನೌಕರರಿಗೆ ನಿಗದಿ ಪಡಿಸಿರುವ ಕನಿಷ್ಟ ವೇತನ | ನೌಕರರ ಸಂಖ್ಯೆ | ಸೇವಾ ಶುಲ್ಕ ( ಸಂಸ್ಥೆಯವರು ನಮೂದಿಸತಕ್ಕದ್ದು) |
|---|---|---|---|---|
| 1 | ಡಾಟಾ ಎಂಟ್ರೀ ಆಪರೇಟರ್ ಪಿ.ಯು.ಸಿ ಮತ್ತು 2 ವರ್ಷದ ಕಂಪ್ಯೂಟರ್ ಸರ್ಟಿಫಿಕೇಟ್ ಕೋರ್ಸ್ | 8350/- | 7 | |
| 2 | ಸೆಕ್ಯುರಿಟಿ ಏಳನೇ ತರಗತಿ ಉತ್ತೀರ್ಣರಾಗಿದ್ದು, ದೃಢಕಾಯ ಶರೀರವನ್ನು ಹೊಂದಿರಬೇಕು | 7515/- | 6 | |
| 3 | ಗ್ರೂಪ್ ಡಿ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು | 5093.50/- | 1 | |

(ವಿವರಗಳನ್ನು ಅನುಬಂಧ 1ರಲ್ಲಿ ನಮೂದಿಸಲಾಗಿದೆ.)

ಸಂಸ್ಥೆಯ ಸಹಿ

ಹೆಸರು ಮತ್ತು ಪದನಾಮ
ವಿಳಾಸ